ಅವರ ಸಹಿಯನ್ನು ಪಹೆಯನ್ನು ಪಡೆದುಕೊಳ್ಳುತ್ತಿದ್ದಾರೆ. ಇದರಿಂದಾಗಿ ಅವರಿಗೆ ಸರಿಯಾಗಿ ಕಾರ್ಯನಿರ್ವಹಿಸುವುದಕ್ಕೆ ಬಿಡುತ್ತಿಲ್ಲ ಎಂಬ ವಿಚಾರವನ್ನು ನಾನು ಸಂಬಂಧಪಟ್ಟ ಮಂತ್ರಿಗಳ ಗಮನಕ್ಕೆ ತರುತ್ತಿದ್ದೇನೆ. ಅದೂ ಅಲ್ಲದೆ, ಇದೇ ಅಧ್ಯಕ್ಷರು ಎರಡು ವರ್ಷಕ್ಕೆ ಮುಂಚೆ ಅವರ ಮನೆ ನಂಬರ್ ಪಡೆದುಕೊಳ್ಳುವುದಕ್ಕೆ ಕಾರ್ಯದರ್ಶಿಗಳಿಗೆ ಹಣ ಕೊಟ್ಟು ಪಡೆದುಕೊಳ್ಳಬೇಕಾದ ಪರಿಸ್ಥಿತಿ ಬಂದಿದೆಯಂತೆ. ಈ ತರಹ ಎಲ್ಲಾ ಅವ್ಯವಹಾರಗಳನ್ನು ಕಾರ್ಯದರ್ಶಿಯವರು ಮಾಡುತ್ತಿದ್ದಾರೆ. ನಾನು ಪರಿಶಿಷ್ಟ ಜಾತಿಗೆ ಸೇರಿರುವುದರಿಂದ ಮತ್ತು ಅನಕ್ಷರಸ್ಥನಾಗಿರುವುದರಿಂದ ನನಗೆ ಕಾರ್ಯನಿರ್ವಹಿಸಲಿಕ್ಕೆ ತೊಂದರೆಯಾಗಿದೆ ಎಂಬುದಾಗಿ ಹೇಳಿದ್ದಾರೆ. ಇದನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಬೇಕು. ಅದಕ್ಕೆ ಸಂಬಂಧಪಟ್ಟ ಕಡತಗಳನ್ನು ನಾನು ತಮ್ಮ ಮುಖಾಂತರ ಸರ್ಕಾರಕ್ಕೆ ಕಳುಹಿಸಿಕೊಡುತ್ತೇನೆ.

ಶ್ರೀ ಎಂ. ಸಿ. ನಾಣಯ್ಯ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೆ, ಅವರು ಎತ್ತಿರತಕ್ಕ ವಿಚಾರವನ್ನು ಮಾನ್ಯ ಗ್ರಾಮೀಣ ಅಭಿವೃದ್ಧಿ ಮಂತ್ರಿಗಳ ಗಮನಕ್ಕೆ ತಂದು ಇದರ ಬಗ್ಗೆ ಸರ್ಕಾರ ಸೂಕ್ತ ಕ್ರಮ ಕೈಗೊಳ್ಳುತ್ತದೆ.

ಅ) : ಅನುಕಂಪದ ಆಧಾರದ ಮೇಲೆ ಕೆಲಸ ನೀಡುವ ಹೊಸ ನಿಯಮ ಕುರಿತು.

ಶ್ರೀ ಬಿ. ಶಿವರಾಮ್ (ಗಂಡಸಿ) : ಮಾನ್ಯ ಅಧ್ಯಕ್ಷರೆ, ಈಗ ರಾಜ್ಯ ಸರ್ಕಾರವು ಅನುಕಂಪದ ಆಧಾರದ ಮೇಲೆ ಕೆಲಸ ನೀಡುವ ಹೊಸ ನಿಯಮವನ್ನು ಜಾರಿಗೊಳಿಸಿದೆ. ನಂಬರ್ ಡಿ. ಪಿ. ಎ. ಆರ್. 100, ಹೆಚ್. ಸಿ. ಎ. 95 12-9-96 ಇದು ಡಿ. ಪಿ. ಎ. ಆರ್. ಸುತ್ತೋಲೆ, ಇದನ್ನು ಮಾನ್ಯ ಮುಖ್ಯ ಮಂತ್ರಿಗಳು ಗಮನಿಸಬೇಕು ಎಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ. ಹಿಂದೆ ಕೂಡ ನಿಯಮ ಇತ್ತು, ಆದರೆ ಕೆ. ಎ. ಟಿ. ಯಿಂದ 20-10-94 ರಲ್ಲಿ ತೀರ್ಪು ಬಂದು ಅದನ್ನು ವಜಾ ಮಾಡಿದರು. ಆದಾದ ನಂತರ ಉಚ್ಚ ನ್ಯಾಯಾಲಯ 10-7-95 ರಲ್ಲಿ ಅನುಕಂಪದ ನೇಮಕಾತಿಗಾಗಿ ಹೊಸ ನಿಯಮಗಳನ್ನು ಕಾನೂನಿನ ಚೌಕಟ್ಟಿನಲ್ಲಿ ರೂಪಿಸುವಂತೆ ಸರ್ಕಾರಕ್ಕೆ ಒಂದು ಆದೇಶವನ್ನು ಕೊಟ್ಟಿತ್ತು. ಅದರ ಪ್ರಕಾರ ಡಿ. ಪಿ. ಎ. ಆರ್. ಅವರು ರೂಲ್ಸ್ ಫ್ರೇ ಮಾಡಿ ನೋಟಿಫಿಕೇಷನ್ ಇಶ್ಯೂ ಮಾಡಿದ್ದಾರೆ. ಅಬ್ಜೆಕ್ಷನ್ ಕೂಡ ಕಾಲ್ ಮಾಡಿದ್ದರು, ಅಬ್ಜೆಕ್ಷನ್ ಬಂತು. ನಾನೂ ಕೂಡ ಅಬ್ಜೆಕ್ಷನ್ ಹಾಕಿದ್ದೆ. ಆದರೆ ಆದೇಶದಲ್ಲಿ ಯಾವುದನ್ನೂ ಬದಲಾವಣೆ ಮಾಡಿಲ್ಲ. ಅದು ಹೇಗಿತ್ತೋ ಅದರ ಪ್ರಕಾರ ಅನೌನ್ಸ್ ಮಾಡಿದ್ದಾರೆ. ಇದರಲ್ಲಿ ಒಂದು ಸತ್ಯಾನ್ಯತೆ ಎನೆಂದರೆ ಹಿಂದೆ ರೂಲ್ಸ್ ಪ್ರಕಾರ ಅನುಕಂಪದ ಆಧಾರದ ಮೇಲೆ ಕೆಲಸ ಕೊಡುವ ಕಾಲದಲ್ಲಿ ಗಂಡ ಸತ್ತರೆ ಹೆಂಡತಿ, ಹೆಂಡತಿ ಸತ್ತರೆ ಗಂಡ, ಮಕ್ಕಳು ಅಥವಾ ಸೋದರರು ಈ ರೀತಿಯಾಗಿ ಬಹಳ ಇತ್ತು. ಇದರಿಂದ ತೊಡಕು ಹೆಚ್ಚಾಗುತ್ತಿತ್ತು. ಈಗ ಹೊಸ ಆದೇಶದಲ್ಲಿ ಏನು ಮಾಡಿದ್ದಾರೆ ಎಂದರೆ, ಗಂಡ ಸತ್ತರೆ ಹೆಂಡತಿ, ಹೆಂಡತಿ ಸತ್ತರೆ ಮಗ ಅಥವಾ ಅವಿವಾಹಿತ ಮಹಿಳೆ ಎಂದು ಮಾಡಿದ್ದಾರೆ. ಇದು ಒಪ್ಪತಕ್ಕ ವಿಚಾರ. ಆದರೆ ಹಿಂದಿನ ನಿಯಮದಲ್ಲಿ ಏನು ಇತ್ತು ಎಂದರೆ 5 ವರ್ಷದವರೆಗೆ ಅರ್ಜಿಯನ್ನು ಹಾಕುವುದಕ್ಕೆ ಒಂದು ಅವಕಾಶವನ್ನು ನಿಯಮಾವಳಿಯಲ್ಲಿ ಕಲ್ಪಿಸಿತ್ತು. ಈಗಿನ ಆದೇಶದಲ್ಲಿ ಡಿ. ಪಿ. ಎ. ಆರ್. ರೂಲ್ಸ್ ಪ್ರಕಾರ ಏನು ಮಾಡಿದ್ದಾರೆ ಎಂದರೆ ಒಂದು ವರ್ಷ

ಎಂದು ಕಲ್ಪಿಸಿದ್ದಾರೆ. ಆದರೆ ಇವತ್ತು ನೋಟಿಫಿಕೇಷನ್‌ನಲ್ಲಿ ಒಂದು ಕ್ಲಾಸ್ ಏನು ಹೇಳುತ್ತದೆ ಎಂದರೆ ಟ್ರಾನ್ಸ್‌ಮಿಷನಲ್ ಪ್ರಾವಿಜನ್ ಅಂದರೆ ಮಧ್ಯದಲ್ಲಿ 2 ವರ್ಷದ ಅವಧಿಯಲ್ಲಿದ್ದ ಎಲ್ಲಾ ಅರ್ಜಿಗಳನ್ನೂ ಏನು ಮಾಡಬೇಕು ಎಂಬುದಕ್ಕೆ - "All applications for appointment on compassionate ground made prior to 20th October 1994 and the applications made on or after the date but before the date of commencement of these rules, and which are pending on the date of commencment of these rules, shall be disposed of in accordance with these rules, within the period of 3 months." ಎಂದಿದೆ ಅಂದರೆ ಹಿಂದೆ ಕೆ. ಎ. ಟಿ. 20-10-94 ರಲ್ಲಿ ಒಂದು ಆದೇಶ ಕೊಟ್ಟಿತ್ತು. ಆದರ ಪ್ರಕಾರ ಹಿಂದೆ ಬಂದಂಥ ಅರ್ಜಿಗಳಿಗೆ ಅಥವಾ ಈ ಮಧ್ಯದಲ್ಲಿ ಬಂದಂಥವುಗಳಿಗೆ 5 ವರ್ಷ ಅವಕಾಶ ಇತ್ತು. ಈಗ ಒಂದು ವರ್ಷದೊಳಗೆ ಅರ್ಜಿ ಹಾಕಿದರೆ ಮಾತ್ರ ಕನ್ಸಿಡರ್ ಮಾಡುತ್ತೇವೆ, ಇಲ್ಲದಿದ್ದರೆ ಮಾಡುವುದಿಲ್ಲ ಎಂದು ನೋಟಿಫಿಕೇಷನ್ ಪ್ರಕಾರ ವಜಾ ಮಾಡುವುದಾದರೆ ಇದರಿಂದ ಅವರಿಗೆ ಜಸ್ಟೀಸ್ ಸಿಗುತ್ತದೆಯೇ?

ಶ್ರೀ ಎಂ. ಸಿ. ನಾಣಯ್ಯ : ಮಾನ್ಯ ಅಧ್ಯಕ್ಷರೆ, ಅನುಕಂಪದ ಆಧಾರದ ಮೇಲೆ ನಾವು ಹೊಸ ನಿಯಮಾವಳಿಗಳನ್ನು ರಚನೆ ಮಾಡಿದ್ದೇವೆ. ಅದಕ್ಕೆ ಕಾರಣ ಏನು ಎಂದು ತಮಗೆ ಗೊತ್ತಿದೆ. 1994ನೇ ಇಸವಿಯಲ್ಲಿ ಕೆ. ಎ. ಟಿ. ಯಲ್ಲಿ ಒಂದು ವಿಚಾರ ಹೋಗಿ ನಮ್ಮ ಈ ನಿಯಮಗಳನ್ನು ರದ್ದು ಮಾಡಿ ಸುಪ್ರೀಂ ಕೋರ್ಟ್‌ಗೆ ಹೋಗಿ ಸುಪ್ರೀಂ ಕೋರ್ಟ್‌ನವರು ತಡೆಗೆ ಒಂದು ತೀರ್ಮಾನವನ್ನು ಕೊಟ್ಟರು. ಸುಪ್ರೀಂ ಕೋರ್ಟ್‌ನವರು ಕೊಟ್ಟಿರುವ ತೀರ್ಪಿನ ಹಿನ್ನೆಲೆಯಲ್ಲಿ ಅನುಕಂಪದ ಆಧಾರದ ಮೇಲೆ ಹುದ್ದೆಯನ್ನು ಕೊಡಬೇಕಾದರೆ ಆದೇಶ ಯಾವುದು ಇದೆ, ಅದರಲ್ಲಿ ಏನು ಹೇಳುತ್ತದೆ ಎಂದರೆ ನಾವು ಯಾವುದಾದರೂ ಒಂದು ಹುದ್ದೆಯನ್ನು ಕೊಡಬೇಕಾದ ಸಂದರ್ಭದಲ್ಲಿ ನೀವು ಆ ಒಂದು ಕುಟುಂಬದಲ್ಲಿರುವವರ ಫೈನಾನ್ಷಿಯಲ್ ಡಿಸ್ಟ್ರೆಸ್ ಅನ್ನು ಗಮನಕ್ಕೆ ತೆಗೆದುಕೊಳ್ಳಬೇಕು. ಫೈನಾನ್ಷಿಯಲ್ ಡಿಸ್ಟ್ರೆಸ್ ಅನ್ನುಗಮನಕ್ಕೆ ತೆಗೆದುಕೊಳ್ಳದೆ ಸಾರಾಸಗಟಾಗಿ ಅನುಕಂಪದ ಆಧಾರದ ಮೇಲೆ ಹುದ್ದೆಯನ್ನು ಕೊಡುವುದು ಸರಿಯಲ್ಲ ಎಂಬ ತೀರ್ಮಾನದ ಹಿನ್ನೆಲೆಯಲ್ಲಿ ನಾವು ನಿಯಮಾವಳಿಯನ್ನು ಹೊಸದಾಗಿ ರಚನೆ ಮಾಡಿದ್ದೇವೆ. ಜೊತೆಗೆ ಸುಪ್ರೀಂ ಕೋರ್ಟಿನ ಆದೇಶಕ್ಕೆ ಅನುಗುಣವಾಗಿ ನಿಯಮಾವಳಿಯನ್ನು ರಚನೆ ಮಾಡಿದ್ದೇವೆ. ಎರಡನೆಯದು, ನಿಯಮಾವಳಿಗಳನ್ನು ರಚನೆ ಮಾಡಿ ಆದಮೇಲೆ ಒಂದು ವರ್ಷ ಅವಧಿ ಎಂದು ಏತಕ್ಕೆ ಕೋಟ್ಟಿದ್ದೇವೆಂದರೆ ಒಂದು ವೇಳೆ ಅಪ್ರಾಪ್ತ ವಯಸ್ಸಿನಲ್ಲಿರುವವರು ಮೆಜಾರಿಟಿಗೆ ಬಂದಮೇಲೆ ಒಂದು ವರ್ಷದೊಳಗೆ ಅವರು ಅರ್ಜಿಯನ್ನು ಕೊಟ್ಟು ಅದಕ್ಕೆ ಸಂಬಂಧಪಟ್ಟ ಈ ಒಂದು ಸೌಲಭ್ಯವನ್ನು ಪಡೆಯಬೇಕಾಗುತ್ತದೆ. ಈ ಮಧ್ಯದಲ್ಲಿ ಅಂದರೆ ಕೆ. ಎ. ಟಿ. ಯವರು ಮತ್ತು ಸುಪ್ರೀಂ ಕೋರ್ಟಿನ ಆದೇಶದ ಮಧ್ಯದಲ್ಲಿ ಯಾರಾದರೂ ಅರ್ಜಿಯನ್ನು ಸಲ್ಲಿಸಿರತಕ್ಕವರು ಇದ್ದರೆ ಆ ಅರ್ಜಿಗಳನ್ನೂ ಸರಿಯಾದ ಅರ್ಜಿ ಎಂದು ಪರಿಗಣನೆ ಮಾಡಿ ಆದನ್ನು 3 ತಿಂಗಳೊಳಗೆ ಇವತ್ತಿನ ನಿಯಮಾವಳಿಯ ಅಡಿಯಲ್ಲಿ ನಾವು ತೀರ್ಮಾನ ಮಾಡಬೇಕು ಅಷ್ಟೆ, ಬಾಕಿ ಏನೂ ಇಲ್ಲ. ಆ ನಿಯಮಾವಳಿಗೆ ಅನುಗುಣವಾಗಿ ಅನುಕಂಪದ ಆಧಾರದ ಮೇಲೆ ಅವರಿಗೆ ಹುದ್ದೆ

ಸಿಗುವುದಿದ್ದರೆ ನಾವು ಕೊಡುತ್ತೇವೆ, ಹುದ್ದೆ ಸಿಗದೆ ಇದ್ದರೆ ನಿಯಮಾವಳಿಯನ್ನು ಮೀರಿ ಕೊಡುವುದಿಲ್ಲ ಎಂದು ಹೇಳುತ್ತೇವೆ.

ಅಪ್ರಾಪ್ತ ವಯಸ್ಸಿನವರು ಎಲ್ಲಾದರೂ ಅರ್ಜಿಯನ್ನು ಹಾಕಬೇಕಾದ ಪರಿಸ್ಥಿತಿ ಬಂದಾಗ ವರ್ಷದೊಳಗೆ ಅವರು ಅರ್ಜಿಯನ್ನು ಸಲ್ಲಿಸಿ ಸೌಲಭ್ಯವನ್ನು ಪಡೆದುಕೊಳ್ಳಬಹುದು ಎಂಬುದು ನಿಯಮಾವಳಿ. ಈ ನಿಯಮಾವಳಿಯನ್ನು ಈಗಾಗಲೇ ಜಾರಿಗೆ ತಂದಿದ್ದೇವೆ. ಈ ನಿಯಮಾವಳಿ ಪ್ರಕಾರ ಅನುಕಂಪದ ಆಧಾರದ ಮೇಲೆ ಈಗಾಗಲೇ ನೌಕರಿ ಕೊಡುತ್ತಿದ್ದೇವೆ. ಇನ್ನೂ ಕೊಡಬೇಕಾಗಿರುವುದನ್ನೂ ಕೂಡ ಪರಿಶೀಲಿಸಿ ಆ ನಿಯಮದ ಅಡಿಯಲ್ಲಿ ಕೊಡುತ್ತೇವೆ.

ಶ್ರೀ ಬಿ. ಶಿವರಾಮ್ : ಈಗ ಅವರು ಹೇಳಿದ್ದೆಲ್ಲಾ ಸತ್ಯ. ಆದರೆ ಕೆ. ಎ. ಟಿ. ಯವರು ಹಿಂದೆ ವಜಾ ಮಾಡಿದ ಅರ್ಜಿಗಳು ಇದ್ದವಲ್ಲ ಅವುಗಳ ಗತಿ ಏನು? ಈಗಿನ ನಿಯಮದ ಪ್ರಕಾರ ಒಂದು ವರ್ಷ ಎಂದು ಮಾಡಿದ್ದೀರಿ. ಹಿಂದೆ 5 ವರ್ಷ ಎಂದು ಇತ್ತು. ಆ ಕಾಲದಲ್ಲಿ ಪೆಂಡಿಂಗ್ ಅರ್ಜಿಗಳನ್ನು ಏನು ಮಾಡುತ್ತೀರಿ? ಈಗ ಅವರಿಗೆ ಏನೆಂದು ಎಂಡಾರ್ಸ್‌ಮೆಂಟ್ ಕೊಡುತ್ತಿದ್ದಾರೆ ಎಂದರೆ, ನೀವು ಒಂದು ವರ್ಷದಳೊಗೆ ಈ ಕಾನೂನು ಪ್ರಕಾರ ಅರ್ಜಿ ಹಾಕಿಲ್ಲದೆ ಇರುವುದರಿಂದ ನಿಮ್ಮ ಅರ್ಜಿಗಳನ್ನು ತಿರಸ್ಕೃತ ಮಾಡುತ್ತಿದ್ದೇವೆ ಎಂದು ಹೇಳುತ್ತಿದ್ದಾರೆ. ಅದಕ್ಕೆ ಏನು ಮಾಡುತ್ತೀರಿ?

ಶ್ರೀ ಎಂ. ಸಿ. ನಾಣಯ್ಯ : ಇದರಲ್ಲಿ ಯಾವುದೇ ಗೊಂದಲಕ್ಕೆ ಅವಕಾಶ ಇಲ್ಲ. ನಿಯಮಾವಳಿಗಳನ್ನು ನಾವು ಬಹಳ ಚೆನ್ನಾಗಿ ರಚನೆ ಮಾಡಿದ್ದೇವೆ. 5 ವರ್ಷದೊಳಗೆ ಬಂದಿರುವ ಎಲ್ಲಾ ಅರ್ಜಿಗಳಿಗೂ ಸಹ ನಾವು ಈ ನಿಯಮದ ಅಡಿಯಲ್ಲಿ 3 ತಿಂಗಳೊಳಗೆ ಪರಿಹಾರ ಕಂಡುಹಿಡಿದು ಸೌಲಭ್ಯ ಒದಗಿಸುತ್ತೇವೆ. ನಾವು ಮೂರು ಸಲ ವಿಚಾರ ಮಾಡಿ ಜಾರಿಗೆ ತಂದಿದ್ದೇವೆ.

ಅ) : ಕೆ. ಇ. ಬಿ. ಅಧ್ಯಕ್ಷರು 17-1-97ರಂದು ಸುತ್ತೋಲೆ ಹೊರಡಿಸಿರುವುದು.

ಶ್ರೀ ಡಿ. ವಿ. ಸದಾನಂದಗೌಡ (ಪುತ್ತೂರು) : ಮಾನ್ಯ ಅಧ್ಯಕ್ಷರೆ, ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯ ಅಧ್ಯಕ್ಷರು ದಿನಾಂಕ 17-1-97 ರಂದು ಒಂದು ಸುತ್ತೋಲೆಯನ್ನು ಇಲಾಖಾ ಅಧಿಕಾರಿಗಳಿಗೆ ಕಳುಹಿಸಿ ವಿದ್ಯುತ್ ಕಡಿತ ಇರದ ಸಂದರ್ಭದಲ್ಲಿ ಒಂದು ತಿಂಗಳಲ್ಲಿ ಎಷ್ಟು ವಿದ್ಯುತ್ ಖರ್ಚಾಗುತ್ತಿತ್ತು, ಅದಕ್ಕಿಂತ ಜಾಸ್ತಿ ವಿದ್ಯುತ್ತನ್ನು ಪೂರೈಕೆ ಮಾಡಬಾರದೆಂದು ಹೇಳಿದ್ದಾರೆ ಮತ್ತು ಆದೇಶವನ್ನು ಪಾಲಿಸದ ಇಂಜಿನಿಯರ್ ಮೇಲೆ ಸೂಕ್ತ ಕ್ರಮ ಕೈಗೊಳ್ಳುತ್ತೇವೆ ಎಂದು ಹೇಳಿದ್ದಾರೆ. ಆದರೆ ಗ್ರಾಮಾಂತರ ಪ್ರದೇಶದಲ್ಲಿ ವಿದ್ಯುತ್ ಪಂಪ್‌ಗಳ ಬಳಕೆ ಕೇವಲ ಜನವರಿಯಿಂದ ಮೇ ತಿಂಗಳವರೆಗೆ ಮಾತ್ರ ಆಗುತ್ತಿದ್ದು ಉಳಿದ ಸಮಯದಲ್ಲಿ ಮನೆಬಳಕೆಗೆ ಮಾತ್ರ ಉಪಯೋಗ ಮಾಡುತ್ತಿದ್ದು ಈ ಸುತ್ತೋಲೆಯಿಂದ ರೈತರು ಯಾವುದೇ ಪಂಪ್ ಚಾಲನೆ ಮಾಡದಂಥಹ ಪರಿಸ್ಥಿತಿಯಲ್ಲಿದ್ದಾರೆ. ಮಳೆಗಾಲದಲ್ಲಿ ಮಾತ್ರ ಪವರ್‌ಕಟ್ ಇಲ್ಲದ ಕಾರಣ ಆ ಮಳೆಗಾಲದ ಸಂದರ್ಭದಲ್ಲಿ ಇಲ್ಲದ ಪವರ್‌ಕಟ್ ಅನ್ನು ಈ ತಿಂಗಳಿಗೂ ಕೂಡ ಸೀಮಿತ ಮಾಡಿದರೆ ಒಂದು ತಾಲ್ಲೂಕಿನಲ್ಲಿ ಒಂದು ದಿವಸ ಕೂಡ ವಿದ್ಯುತ್ ಪಂಪ್‌ಗಳನ್ನು ರನ್ ಮಾಡುವ ಪರಿಸ್ಥಿತಿಯಲ್ಲಿ ರೈತರು ಇಲ್ಲ. ತಕ್ಷಣ ಸರ್ಕಾರ ಈ ಬಗ್ಗೆ ಗಮನ ಹರಿಸಿ ಕೆ. ಇ. ಬಿ.